"The Leave be granted to introduce —

The Karnataka Appropriation (No. 2) Bill, 1983"

MR. SPEAKER.—The Question is :

"That leave be granted to introduce

the Karnataka Appropriation (No. 2) Bill, 1983"

Motion was adopted and the leave was granted to introduce the Bill

SRI A LAKSHMISAGAR.—Sir I introduce the Karnataka Appropriation No. 2 Bill 1983

MR. SPEAKER —The Bill is introduced.*

(INTERRUPTION)

MR. SPEAKER.—Order, Order,

(INTERRUPTION)

(ಕಾಂಗ್ರೆಸ್ ಮತ್ತು ಕಾಂತಿರಂಗದ ಸದಸ್ಯರು ವಿಧಾನ ಸಭಾಧ್ಯಕ್ಷರ ಸುತ್ತ ಬಂದು ನಿಂತು ಪ್ರತಿಭಟನೆ ವ್ಯಕ್ತಪಡಿಸಿದರು. ಕೆಲವು ಮಾನ್ಯ ಸದಸ್ಯರುಗಳು ಧ್ವನಿವರ್ಧಕವನ್ನು ಕಿತ್ತರು ಮತ್ತು ಅಧ್ಯಕ್ಷರ ಮೇಜಿನ ಮೇಲಿದ್ದ ಕಾಗದ ಪತ್ರಗಳನ್ನು ಪರಿದು ಹಾಕಿದರು.)

(ಗೊಂದಲ)

MR. SPEAKER. Now, the House stands adjourned for ten minutes.

The House adjourned at 2.54 to meet again after 10 minutes.)

Dharna by members and their suspension

(ಸಭೆಯು ಪುನಃ ೬ ಘಂಟೆ ೧೦ ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಟವನ್ನು ಅಲಂಕರಿಸಿದರು)

(ಗೊಂದಲ — ಗಲಾಟೆ)

ಅಧ್ಯಕ್ಷರು .— ತಮ್ಮ ತಮ್ಮ ಸ್ಥಾನಗಳಿಗೆ ಮಾನ್ಯ ಸದಸ್ಯರೆಲ್ಲರೂ ಹೋಗಿ ಕುಳಿತುಕೊಳ್ಳಬೇಕೆಂದು ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

x x x

ಶ್ರೀ ಎಸ್. ಆರ್. ಬೊಮ್ಮಾಯಿ .— ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ನಾನು ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಅವರಿಗೆ ವಿಚಾರಗಳನ್ನು ಹೇಳುವುದಕ್ಕೆ ಈ ಸದನದಲ್ಲಿ ಸಾಕಷ್ಟು ಅವಕಾಶಗಳಿವೆ. ಈ ವಿಚಾರದ ಬಗ್ಗೆ ಚರ್ಚೆ ಕೂಡಾ ತಂದರೆ ಅದಕ್ಕೂ ಕೂಡ ನಾವು ಒಪ್ಪಿಕೊಂಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳವರು ಏನು ಶ್ವೇತ ಪತ್ರವನ್ನು ಮಂಡಿಸಿದ್ದಾರೆ ಅದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡಿಯೇಳುವುದಕ್ಕೆ ಮಾನ್ಯ ಸದಸ್ಯರುಗಳಿಗೆ ಹಕ್ಕಿದೆ, ಅದನ್ನು ಬಿಟ್ಟು ಧರಣಿ ಮಾಡತಕ್ಕದ್ದು ನಮ್ಮ ದೃಷ್ಟಿಯಲ್ಲಿ ಅದು ಅಷ್ಟೊಂದು ಸರಿಯಾದುದಲ್ಲವೆಂದು ಅವರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

x x x

---

* Annexure

*Expanged as ordered by the Chair.

ಶ್ರೀ ಎಸ್.ಆರ್. ಬೊಮ್ಮಾಯಿ .— ರಾಜಕೀಯ ಪಕ್ಷದ ಪ್ರಚಾರಕ್ಕಾಗಿ, ವ್ಯಕ್ತಿ ಪ್ರಚಾರಕ್ಕಾಗಿ ನಾವು ಎಂದಿಗೂ ಈ ಸದನವನ್ನು ಉಪಯೋಗ ಮಾಡಿಕೊಂಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರವರೂ ಸಹ ಹಿಂದೆ ಆಡಳಿತ ನಡೆಸಿದಂಥವರು ಆವರಿಗೂ ಸಹ ಗೊತ್ತಿದೆ ಇಂಥಾ ಸಂದರ್ಭಗಳಲ್ಲಿ ಧರಣಿ ಕೂತಿರುವಂಥಾ ಪ್ರಸಂಗಗಳು ಬಂದಿವೆ. ಇಲ್ಲವೆಂದು ಅಲ್ಲ ಆದರೆ ನಮ್ಮ ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಸಭಾಪತಿಯವರ ವೇದಿಕೆಯ ಮೇಲೆ ಹೋಗಿ ಮೈಕ್ ಪಿಯುರಿಯುವಂಥಾದ್ದು ಹಿಂದೆಂದೂ ನಡೆದಿರಲಿಲ್ಲ.

(ಗೊಂದಲ)

x x x

ಶ್ರೀ ಎಸ್. ಆರ್. ಬೊಮ್ಮಾಯಿ .— ಇವತ್ತು ನಡೆದಂಥ ಘಟನೆ ಏನಿದೆ, ಇದರಿಂದ ನಾವು ರಾಷ್ಟ್ರದ ಜನತೆಯ ಮುಂದೆ ತಲೆ ಬಾಗುವಂಥ ಒಂದು ಕರ್ತವ್ಯವನ್ನು ನಮ್ಮ ವಿರೋಧ ಪಕ್ಷದ ಸದಸ್ಯರುಗಳು ಮಾಡಿದ್ದಾರೆ, ಇದು ಸರಿಯಾದುದಲ್ಲ.

(ಗೊಂದಲ)

x x x

ಶ್ರೀ ಎಸ್. ಆರ್. ಬೊಮ್ಮಾಯಿ .— ಕರ್ನಾಟಕದ ಜನತೆಗೆ ಗೊತ್ತಾಗುತ್ತದೆ. ದಯವಿಟ್ಟು ತಾವು ತಮ್ಮ ಜಾಗಗಳಿಗೆ ಹೋಗಬೇಕೆಂದು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

MR. SPEAKER .— I hope hon. members will hear me for a few minutes.

ತಾವು ಅತ್ಯಂತ ದೊಡ್ಡ ಜವಾಬ್ದಾರಿಯಾದಂಥ ಅಪ್ರೋಪ್ರಿಯೇಷನ್ ಬಿಲ್‌ನ ಮೇಲೆ ಮಾತನಾಡಬೇಕಾಗಿದೆ.

(ಗೊಂದಲ)

x x x

MR. SPEAKER .— It is for the hon. members to pass the Appropriation Bill, I appeal to you to pass the Bill.

(INTERRUPTION)

MR. SPEAKER :— If this is the attitued of the Opposition I am extremely sorry. This should not be the behaviour.

ನನ್ನ ಮೇಲೆ ವಿಶ್ವಾಸವಿಲ್ಲದಿದ್ದರೆ ತಮಗೆ ಬೇರೆಬೇರೆ ರೀತಿಯಲ್ಲಿ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಲು ಮಾರ್ಗಗಳು ಇರುತ್ತವೆ. ಅದನ್ನು ಅನುಸರಿಸಿ.

x x x

ಅಧ್ಯಕ್ಷರು .— ತಮಗೆ ವಿಶ್ವಾಸವಿಲ್ಲದೆ ಇದ್ದರೆ ಬೇರೆ ಮಾರ್ಗಗಳು ಇದ್ದಾವೆ.

This pains me ... I hope you would not give room for doing this. If you do not have confidence in me, there are other ways to show this. You have a right to do that.

(ಗೊಂದಲ)

x x x

---

* Expunged as order by the chair.

ಅಧ್ಯಕ್ಷರು .—ನನ ಬಗ್ಗೆ ವಿಶ್ವಾಸವಿಲ್ಲದೆ ಇದ್ದರೆ ಅದನ್ನು ಬೇರೆ ರೀತಿಯಲ್ಲಿ ವ್ಯಕ್ತ ಪಡಿಸಬಹುದಾ ಗಿತ್ತು. ಮಾನ್ಯ ಸದಸ್ಯರು ಈ ರೀತಿ ವರ್ತನೆ ಮಾಡುವುದು ಸರಿಯಲ್ಲ. ಮಾನ್ಯ ಸದಸ್ಯರನ್ನು ಇನ್ನೂಮ್ಮೆ ಪ್ರಾರ್ಥಿಸಿಕೊಳ್ಳುತ್ತೇನೆ ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(INTERRUPTION)

MR. SPEAKER .— Then I have no other alternative. In the interest of the dignity of the House, I name the members who are sitting in the well of the House.

x x x

Some hon. Members of the Opposition took the mike of the Speaker and obstructed him while announcing the names)

MR. SPEAKER.— I name the following Members for obstructing the proceedings of the House in a disorderly manner.

Sriyuths :

1 M. Veerappa Moily
2 Govind P. Vodeyaraj
3 S. Bangarappa
4 Dharamsingh Narayan Singh
5 Manik Rao Patil
6 Bheemanna Khandre
7 V.S. Koujalgi
8 H.D. Chowdaih
9 B.B. Chimmanakatti
10 Mallikarjun. M. Kharge
11 B. Shivanna
12 M.S. Patil
13 M.M. Nadaf
14 G.K. Venkatashiva Reddy
15 B. Bhyrappaji
16 Kuradagi Kuberappa Hanumanthappa
17 K.S. Kalamari Gowda
18 M. Mahadev
19 Desai Alagoud Basaprabhu
20 Basavaraj Patil Anwari
21 M.M. Nanaiah
22 M.G. Naik
23 Kattimani Ashok Krishnoji
24 L.T. Thimmappa Hegde
25 G.K. Subbaiah
26 Pratapchandra Shetty
27 A.A. Nimbalkar
28 Mallikarjuna Basappa Diwatar
29 Madan Gopal Naik
30 C. Venkateshappa
31 Dr. H.R. Raju
32 F.A. Koppad
33 B Swamy Rao
34 R.N Naik
35 M. Ramappa
36 K. Shiva Murthy
37 Kanade Gopal Mukund
38 B.M. Patil
39 G.S. Basavaraj
40 V. Muniappa
41 S.R. Morey
42 H. Naganagouda
43 A. Nagaraju
44 Kulkarni Mallappa Karaveerappa
45 Hegde Sripad Ramakrishna
46 S.P. Gangadharappa
47 T.H. Hanumantharajappa
48 M. Manche Gowda
49 Hiroji Lad
50 D.B. Pawar
51 C. Made Gowda
52 N. Chikke Gowda

I request them to withdraw from the House
(No Member withdraw from the House)

SRI BAPUGOWDA DHARSHANAPUR (Government Chief Whip) ; Sir, I move.— "That the following members be suspended from the House till the end of the current Session."

Sriyuths.—

1 M. Veerappa Moily
2 Govinda P. Vodeyaraj
3 S. Bangarappa
4 Dharmasingh Narayansingh
5 Manik Rao Patil
6 Bheemanna Khandre
7 V.S. Koujalgi
8 H.D. Chowdaiah
9 B.B. Chimmanakatti
10 Mallikarjan M. Kharge
11 B Shivanna
12 M.S. Patil
13 M.M. Nadaf
14 G.K. Venkatashiva Reddy
15 B. Bhyrappaji
16 Kuradagi Kuberappa Hanumanthappa
17 K.S. Kalamari Gowda
18 M. Mahadev
19 Desai Alagoud Basaprabhu
20 Basavaraj Patil Anwari
21 M.M. Nanaiah
22 M.G. Naik
23 Kattimani Ashok
24 L T. Thimmappa Hegde
25 G.K. Subbaiah
26 Prathapachandra Shetty
27 A.A Nimbalkar
28 Mallikarjuna Basappa Diwatar
29 Madan Gopal Naik
30 C. Venkateshappa
31 Dr. H.R. Raju
32 F.A. Koppad
33 B. Swamy Rao
34 R.N. Naik
35 M. Ramappa
36 K Shiva Murthy
37 Kanade Gopal Mukund
38 B.M. Patil
39 G.S. Basavaraj
40 V. Muniappa
41 S.R. Morey
42 H. Naganagouda
43 A. Nagaraju
44 Kulkarni Mallappa Karaveerappa
45 Hegde Sripad Ramakrishna
46 S.P. Gangadarappa
47 T.H. Hanumantharajappa
48 M. Manche Gowda
49 Hiroji Lad
50 D.B. Pawar
51 C. Made Gowda
52 N. Chikke Gowda

(The Hon. Members continued to sit in the aisle)

MR. SPEAKER.—I will put the Motion to the vote of the House. The question is.—

"That the following Members be suspended from the House till the end of the current Session."

Sriyuths.—

1	M. Veerappa Moily	27	A.A. Nimbalkar
2	Govind P. Vodeyaraj	28	Mallikarjuna Basappa Diwatar
3	S. Bangarappa	29	Madan Gopal Naik
4	Dharamsingh Narayan Singh	30	C. Venkateshappa
5	Manik Rao Patil	31	Dr. H.R. Raju
6	Bheemanna Khandre	32	F.A. Koppad
7	V.S. Koujalgi	33	B. Swamy Rao
8	H.D. Chowdaiah	34	R.N. Naik
9	B.B Chimmanakatti	35	M. Ramappa
10	Mallikarjuna. M. Kharge	36	K. Shiva Murthy
11	B. Shivanna	37	Kanade Gopal Mukund
12	M.S. Patil	38	B.M. Patil
13	M.M. Nadaf	39	G.S. Basavhraja
14	G.K. Venkatashiva Reddy	40	V. Muniappa
15	B. Byrappaji	41	S.R. Morey
16	Kuradagi Kuberappa Hanumanthappa	42	H. Naganagonda
17	K S. Kalamari Gowda	43	A. Nagaraju
18	M Mahadev	44	Kulkarni Mallappa Karaveerappa
19	Desai Alagoud Basaprabhu	45	Hegde Sripad Ramakrishna
20	Basavaraj Patil Anwari	46	S.P. Gangadharappa
21	M.M. Nanaiah	47	T.H. Hanumantharajappa
22	M.G, Naik	48	M. Manche Gowda
23	Kattimani Ashok Krishnoji	49	Hiroji Lad
24	L.T. Thimmappa Hegde	50	D.B. Pawar
25	G.K. Subbaiah	51	C. Made Gowda
26	Prathapachandra Shetty	52	N. Chikke Gowda

The motian was adopted and the 52, Members mentioned above were suspended till the end of the current session

MR. SPEAKER : I know adjourn the House for ten minutes.

(The House adjourned at Thirty Minutes past Six of the Clock to meet again after ten minutes

(ಸಭೆಯು ಪುನಃ ೬ ಗಂಟೆ ೪೦ ನಿಮಿಷಕ್ಕೆ ಸಮಾವೇಶಗೊಂಡಿತು.)

(ಮಾನ್ಯ ಅಧ್ಯಕ್ಷರು ಪೀಠದಲ್ಲಿ)

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ನಾನು ಎರಡು ನಿಮಿಷ ಮಾತನಾಡಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ಏನೊಂದು ಘಟನೆ ನಡೆಯುತು, ಘಟನೆ ದುರ್ದೈವದ ಘಟನೆ. ಅಂತಹ ಘಟನೆ ನಡೆಯಬಾರದಾಗಿತ್ತು. ಆದರೆ ಘಟನೆ ನಡೆದು ಹೋಗಿದೆ. ಪ್ರಜಾ ಪ್ರಭುತ್ವದ ಯುಗದಲ್ಲಿ ಎಲ್ಲರೂ ಮಾತನಾಡುವುದಕ್ಕೆ ಹಕ್ಕು ಇದೆ, ಮತ್ತು ಅದಕ್ಕೆ ವಿರೋಧ ವ್ಯಕ್ತ ಪಡಿಸುವ ಹಕ್ಕು ಸಹ ಇದೆ. ಈ ಸದನದಲ್ಲಿ ಎಲ್ಲರೂ ಕೂಡ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿದ್ದೇವೆ. ಆದರೂ ಸಹ ತಮಗೆ ಕೆಲವು ಸಲ ಉದ್ರೇಕದಿಂದ ಮಾತನಾಡಿದ್ದು ಇದೆ. ಅಷ್ಟು ಮಾತ್ರವಲ್ಲದೆ ಧರಣಿ ಮಾಡಿರತಕ್ಕದ್ದೂ ಇದೆ. ನಾವು ಮಾಡಿಲ್ಲವೆಂದು ಹೇಳುವುದಿಲ್ಲ, ಒಂದು ದಿವಸ ಅಲ್ಲ, ಮೂರು ದಿವಸಗಳ ಕಾಲ ಇದೇ ಜಾಗದಲ್ಲಿ ವಿರೋಧಪಕ್ಷದವರ ಜೊತೆ ಧರಣಿ ಕುಳಿತಿದ್ದೇವೆ. ನಾವು ಧರಣಿ ಕುಳಿತದ್ದು ಆಗಿನ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ, ರೈತರ ಅನುಕೂಲತೆಗಳ ಬಗ್ಗೆ, ಮತ್ತು ಬೇರೆ ವಿಚಾರಗಳ ಬಗ್ಗೆ ನಾವು ಧರಣಿ ಕುಳಿತದ್ದು ನಿಜ. ಆದರೆ, ಇವತ್ತು ನಡೆದಂತಹ ಘಟನೆ ಬಹಳ ನಾಚಿಕೆಗೇಡಿನ ಕೆಲಸ. ಈ ಸಭೆಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿರುವಾಗ, ಆ ಸ್ಥಾನದಲ್ಲಿ ಅಧ್ಯಕ್ಷರು ಕುಳಿತಿರುವಾಗ, ಸಭಾಧ್ಯಕ್ಷರಿಗೆ ವಂದಾಲದೆ ಕೊಡುವುದು ಪ್ರತಿಯೊಬ್ಬ ಸದಸ್ಯನ ಜವಾಬ್ದಾರಿ ಇದೆ. ಸಭಾಧ್ಯಕ್ಷರ ತೀರ್ಮಾನಗಳ ಬಗ್ಗೆ ಭಿನ್ನಾಭಿಪ್ರಾಯ ಇದ್ದರೆ ನಮಗೆ ವಿಧಿನಿಯಮಗಳು ಇವೆ. ಆ ಪ್ರಕಾರ ಏನು ಹೇಳಬೇಕೋ ಅದನ್ನು ಹೇಳಬೇಕು, ಅದಕ್ಕೂ ಸಹ ನಮಗೆ ಅವಕಾಶಗಳಿವೆ. ಅಷ್ಟು ಮಾತ್ರವಲ್ಲದೆ ಅಧ್ಯಕ್ಷರು ನಮಗೆ ಮಾತನಾಡಲಿಕ್ಕೆ, ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಿಕ್ಕೆ ಅವಕಾಶ ಕೊಡುವುದಿಲ್ಲ ಅಂದರೆ, ಅವರ ಬಗ್ಗೆ ಸೂಚನೆಗಳನ್ನು ತೆಗೆದುಕೊಂಡು ಅವರ ಬಗ್ಗೆ ನಂಬಿಕೆಯಿಲ್ಲವೆಂದು ಹೇಳಲಿಕ್ಕೆ ಅವಕಾಶವಿದೆ. ಇಷ್ಟೆಲ್ಲಾ ಅವಕಾಶ ಇರಬೇಕಾದರೆ ಆ ಅವಕಾಶವನ್ನು ಉಪಯೋಗಪಡಿಕೊಳ್ಳದೆ, ಇವತ್ತು ಇಲ್ಲಿಗೆ ಬಂದು ಕೂಗಾಡಿ, ಅಧ್ಯಕ್ಷರಿಗೆ ಧಿಕ್ಕಾರ ಹಾಕಿ, ಮೈಕನ್ನು ಮುರಿದು ಅಪರಾಧ ಮಾಡಿರುವುದು ನನಗೆ ಬಹಳ ವ್ಯಥೆಯಾಗಿತ್ತಿದೆ. ಯಾರೇ ಆಗಲಿ ಆ ರೀತಿಯು ಕೆಲಸಮಾಡಬಾರದು. ತಾವು ರೂಲಿಂಗ್ ಕೊಟ್ಟಿದ್ದೀರಿ, ತಪ್ಪು ರೂಲಿಂಗನ್ನು ಪ್ರಶ್ನೆ ಮಾಡತಕ್ಕ ಅಧಿಕಾರ ನಮಗೆ ಯಾರಿಗೂ ಇಲ್ಲ. ತಪ್ಪು ರೂಲಿಂಗ್ ಬಗ್ಗೆ ಕೆಲವರು ನನಗೆ ತಿಳಿದಮಟ್ಟಿಗೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಬಹುದು ಆದರೆ ಅದನ್ನು ಪ್ರಶ್ನೆ ಮಾಡುವುದಕ್ಕೆ ಅಧಿಕಾರವಿಲ್ಲ. ತಾವು ಸಹನೆಯಿಂದ ಎಷ್ಟೇ ಕೇಳಿಕೊಂಡರೂ ತಮಗೆ ಸಹಕಾರ ಕೊಡದೆ, ಯಾವುದಕ್ಕೂ ಗಮನಕೊಡದೆ ಮೈಕನ್ನು ಕಿತ್ತು ಹಾಕಿದರು ಅಂದರೆ ನನಗನಿಸುತ್ತದೆ ಇದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆ ತರತಕ್ಕಂತಹ ರೀತಿಯಲ್ಲಿ ನಮ್ಮ ವಿರೋಧಪಕ್ಷದ ಸದಸ್ಯರು ಇವತ್ತಿನ ದಿವಸ ಮಾಡಿದ್ದಾರೆಂದು ಹೇಳಬೇಕಾಗಿದೆ. ಹೀಗೆ ಆಗಿರುವುದು ದುರದೃಷ್ಟಕರ. ಈ ರೀತಿ ಆಗಬಾರದಾಗಿತ್ತು. ಅವರು ಎರಡು ಪ್ರಶ್ನೆಗಳನ್ನು ಎತ್ತಿದ್ದಾರೆ. ಒಂದು ಶ್ವೇತಪತ್ರ, ಇನ್ನೊಂದು ತಾವು ಕೊಟ್ಟಿರುವ ರೂಲಿಂಗ್ ವಿಷಯದಲ್ಲಿ ಸಭೆಯನ್ನು ಅಡ್ವರ್ನ್ ಮಾಡಬೇಕೆಂದು ಹೇಳಿದರು. ಯಾವರೀತಿ ಅಡ್ವರ್ನ್ ಮಾಡಬೇಕೆಂದು ಹೇಳಿದರೋ ನನಗೆ ಗೊತ್ತಿಲ್ಲ ಅಡ್ವರ್ನ್ ಮಾಡಲಿಕ್ಕೆ ಹೇಳಬಹುದು, ತಾವು ಬಂದಮೇಲೆ ಹೇಳಲಿಕ್ಕೆ ಅವಕಾಶವಿತ್ತು. ಅದನ್ನು ಉಪಯೋಗ ಮಾಡಿಕೊಳ್ಳಬಹುದಾಗಿತ್ತು ಆದರೆ ಅಷ್ಟು ಉದ್ವೇಗದಿಂದ, ಅವರು ಭಾಷಣ ಮಾಡಿದ ವೈಖರಿ ಸರಿಯಲ್ಲ. ತಾವು ಹೇಳಿದ್ದಕ್ಕೂ ಗಮನಕೊಡದೆ ಆ ರೀತಿ ಮಾಡಿರತಕ್ಕದ್ದು ಖಂಡಿತವಾಗಿಯೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಘನತೆ ಮತ್ತು ಗೌರವ ಕೊಟ್ಟಲ್ಲ, ಜೊತೆಗೆ ಅಪಮಾನಕರ ರೀತಿಯಲ್ಲಿ ಅವರನ್ನು ಆರಕ್ಷಕ ಸಿಬ್ಬಂದಿಯವರು ಸಭೆಯಿಂದ ಹೊರಗೆ ಹೊತ್ತುಕೊಂಡು ಹೋಗಿರತಕ್ಕದ್ದು ನಮಗೂ ದುಃಖದ ವಿಷಯ. ಅವರನ್ನು ಹೊರಗೆ ಹಾಕತಕ್ಕಂತಹ ನಿರ್ಣಯ ತೆಗೆದು ಕೊಂಡಿರತಕ್ಕದ್ದು ಯಾರಿಗೂ ಸಂತೋಷವನ್ನು ಉಂಟುಮಾಡಿಲ್ಲ. ವಿಧಿ ಇಲ್ಲದೆ ತಾವು ಆ ಕ್ರಮವನ್ನು ತೆಗೆದುಕೊಳ್ಳಬೇಕಾಗಿ ಬಂತು. ಹಿಂದೆ ಈ ಸದನದಲ್ಲಿ ಸದಸ್ಯರು ಈ ಸಭೆಗೆ ಕಳಂಕ ಬರುವ ರೀತಿಯಲ್ಲಿ ನಡೆದುಕೊಂಡಿಲ್ಲ. ಆದರೆ ಇವತ್ತಿನ ದಿವಸ ವಿರೋಧ ಪಕ್ಷದ ಸದಸ್ಯರು ಕಳಂಕ ಬರುವ ರೀತಿಯಲ್ಲಿ ವರ್ತಿಸಿರುವುದು ಸರಿಯಾದುದಲ್ಲ. ಮುಂದೆ ಸರಿಯಾದ ರೀತಿಯಲ್ಲಿ ವರ್ತಿಸುವಂತೆ ವಿರೋಧಪಕ್ಷದ ನಾಯಕರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆಳುವ ಪಕ್ಷದ ಸದಸ್ಯರಲ್ಲಿಯೂ ಸಹ ಕೇಳಿ

ಕೊಳ್ಳಬೇಕಾಗಿದೆ, ಪದಗಳನ್ನು ಬಳಸಬೇಕಾದರೆ, ಯಾವ ರೀತಿಯ ಪದಗಳನ್ನು ಬಳಸಬೇಕೆಂಬುದನ್ನು ತಿಳಿದುಕೊಳ್ಳಬೇಕು. ಉದ್ರೇಕ ಬರುವ ಪದಗಳನ್ನು ಬಳಸಿದರೆ ಉದ್ರೇಕ ಉಂಟಾಗಲಿಕ್ಕೆ ಅವಕಾಶ ವಾಗುತ್ತದೆ. ಆಳುವ ಪಕ್ಷದ ಸದಸ್ಯರಿಗೆ ಹೆಚ್ಚು ಜವಾಬ್ದಾರಿಯಿದೆ. ವಿರೋಧ ಪಕ್ಷದ ಸದಸ್ಯರುಗಳಿಗಿಂತ ನಮಗೆ ಜವಾಬ್ದಾರಿಯಿದೆ. ತಾವು ಸರಿಯಾದ ರೀತಿಯಲ್ಲಿ ವರ್ತಿಸಬೇಕು. ತಾವು ಮಾತನಾಡುವಾಗ ಬಳಸತಕ್ಕ ಪದಗಳು ಉದ್ರೇಕ ಬರುವ ರೀತಿಯಲ್ಲಿ ಮಾತನಾಡುತ್ತೀರಿ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಪಕ್ಷದ ಸದಸ್ಯರುಗಳಿಗೆ ತಿಳುವಳಿಕೆ ಕೊಡಬೇಕು. ನಾವು ಏನೇನು ಕೆಲಸಕಾರ್ಯಗಳನ್ನು ನಿರೀಕ್ಷೆ ಮಾಡುತ್ತೇವೆ, ಜನಗಳ ಸಮಸ್ಯೆಯನ್ನು ಇತ್ಯರ್ಥ ಮಾಡುವುದಕ್ಕೆ ಈ ಸದನ ಇದೆ. ಕಾನೂನು ಮಾಡುವುದಕ್ಕೆ ಈ ಸದನ ಇದೆ, ಜನತೆಗೆ ರಕ್ಷಣೆ ಮಾಡುವುದಕ್ಕೆ ಈ ವಿಧಾನಸಭೆ ಇದೆ. ಆ ಒಂದು ಅವಕಾಶವನ್ನು ಕಲ್ಪಿಸಿಕೊಂಡು ಆ ರೀತಿ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ತಮಗೆ ಧಿಕ್ಕಾರ ಹಾಕಿದ್ದು ನನಗೆ ವೇದನೆಯಾಗಿಲ್ಲದೆ ಎಂದು ಹೇಳಿ ಆ ರೀತಿ ಇನ್ನು ಮುಂದೆ ಆಗದಿರಲೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ. ಎಸ್. ಆಚಾರ್ಯ (ಉಡುಪಿ).—ಮಾನ್ಯ ಅಧ್ಯಕ್ಷರೆ ವಿಧಾನಸಭೆ ಮತ್ತು ಸಂಸತ್ ಅಂದರೆ ಪ್ರಜಾಪ್ರಭುತ್ವದೊಳಗೆ ಜನರ ಆಶೋತ್ತರಗಳನ್ನು ಈಡೇರಿಸತಕ್ಕ ಮತ್ತು ಅವರ ಭವಿಷ್ಯವನ್ನು ರೂಪಿಸತಕ್ಕ ಪವಿತ್ರವಾದ ವೇದಿಕೆಗಳೆಂದು ನಾವು ನಂಬಿದ್ದೇವೆ. ಸರ್ಕಾರ ಪರಸ್ಪರ ಸಲಹೆ ಮುಖಾಂತರ ಒಂದು ನಿರ್ಣಯಕ್ಕೆ ಬಂದು ಕಾರ್ಯ ನಡೆಸಬೇಕಾಗುತ್ತದೆ. ಅದು ಬಹುಮತದ ನಿರ್ಣಯವೆಂದು ತಿಳಿಯ ಬೇಕಾಗಿರುತ್ತದೆ. ಇದೇ ಮೇಲೆ ಸರ್ಕಾರ ನಡೆಸುವವರು ಈ ಸದನದ ಕೊನೆಯ ಸದಸ್ಯರನ್ನೊಳಗೊಂಡು ಪ್ರತಿಯೊಂದು ವಿಚಾರದಲ್ಲೂ ಮನವಟ್ಟುಮಾಡಿಕೊಂಡು ಯಾವುದೇ ಕೆಲಸ ಮಾಡಬೇಕಾದರೂ ಒಂದು ಬಹುಮಂತದ ತೀರ್ಮಾನಕ್ಕೆ ಬರಬೇಕಾಗುತ್ತದೆ. ಯಾವುದೇ ಒಂದು ತೀರ್ಮಾನ ತೆಗೆದುಕೊಳ್ಳ ಬೇಕಾದರೂ ಈ ಸದನದ ಕೊನೆಯ ಸದಸ್ಯರ ನಿರ್ಧಾರವನ್ನು ತೆಗೆದುಕೊಳ್ಳವುದು ಬಹಳ ಒಳ್ಳೆಯದು ಇದೆ. ಆ ರೀತಿಯಾದರೆ ಯಾವುದೇ ಕಾರ್ಯಕ್ಕೆ ಅಡ್ಡಿಯಿರುವುದಿಲ್ಲ. ಆದರೆ ಇವತ್ತು ಶ್ವೇತಪತ್ರವನ್ನು ಸದನದಲ್ಲಿ ಇಟ್ಟಂತಹ ಸಮಯದಲ್ಲಿ ಬೇಕಾದಷ್ಟು ಚರ್ಚೆಯಾಗಿದೆ. ಅವರ ಬಗ್ಗೆ ಮನಸಾರೆ ಮಾಡು ವಂತಹ ಕೆಲಸವನ್ನು ಆ ಕಡೆಯ ಸದಸ್ಯರು ಮಾಡಿದ್ದಾರೆ. ಅದಕ್ಕೆ ವಿರೋಧ ಮಾಡುವಂತಹ ಕಾರ್ಯ ವನ್ನು ಅವರು ಮಾಡಿದ್ದಾರೆ. ಅವನ್ನು ವಿರೋಧ ಮಾಡಿ ಸದನದಿಂದ ಹೊರಗೆ ಹೋಗುವಂತಹ ಕೆಲಸವನ್ನು ವಿರೋಧ ಪಕ್ಷದವರು ಮಾತನಾಡಬಾರದಾಗಿತ್ತು. ಅದಕ್ಕೆ ಬದಲಾಗಿ ಧರಣಿ ಕುಳಿತದ್ದು ಮಾತ್ರವಲ್ಲದೆ, ನಾನು ನೋಡುತ್ತಿದ್ದೆ, ತಮ್ಮ ಮೇಜಿಕೆಯ ಪಕ್ಕಿರ ಬಂದು ಅಲ್ಲಿರತಕ್ಕ ಪುಸ್ತಕಗಳನ್ನು ಮೈಕು ಮೈಕನ್ನು ಹಿಡಿದೆಳೆದು, ರೆಕಾರ್ಡ್‌ಗಳನ್ನು ಬಿಸಾಡಿ ಜೊತೆಗೆ ತಮಗೆ ದಿಕ್ಕಾರ ಹೇಳುವಂತಹ ಕೆಲಸವನ್ನು ಮಾಡಿದ್ದಾರೆ ಶ್ವೇತ ಪತ್ರದ ಬಗ್ಗೆ ಇಷ್ಟು ದೊಡ್ಡ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸರಿಯಾದುದಲ್ಲ. ಬಹಳ ಜನರು ಇದರ ಬಗ್ಗೆ ತಮ್ಮ ವ್ಯಥೆಯನ್ನು ವ್ಯಕ್ತಪಡಿಸಿದ್ದಾರೆ, ನಾನು ಸಹ ಬಹಳ ವ್ಯಥೆಯಿಂದ ಹೇಳುತ್ತಿದ್ದೇನೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಆಳುವಂತಹ ಜನ ಈ ಪಕ್ಷದವರು ಕೇಂದ್ರಸರ್ಕಾರದಲ್ಲೂ ಅವರದೇ ಪಕ್ಷ ಆಳುತ್ತಿದೆ. ಅವರು ಇಂತಹ ಕೆಲಸವನ್ನು ಮಾಡಬಹುದೇ ಎಷ್ಟುವುದನ್ನು ಅವರು ಯೋಚನೆ ಮಾಡಬೇಕಾಗುತ್ತದೆ. ಇಲ್ಲಿ ಒಂದು ವಿಚಾರವನ್ನು ಉಲ್ಲೇಖ ಮಾಡಬೇಕಾಗಿದೆ. ದೇಶದ ಬೇರೆ ಬೇರೆ ವಿಧಾನಸಭೆಗಳಲ್ಲಿ ಇಂತಹ ಒಂದು ಸಂದರ್ಭ ಉಂಟಾದಾಗ, ಎಂತಹ ಉದ್ವಿಗ್ನ ಪರಿಸ್ಥಿತಿ ಬಂದರೂ ಇಂತಹ ಘಟನೆಗಳು ನಡೆಯಬಾರದು. ಪ್ರಜಾಪ್ರಭುತ್ವದ ಪೌಲ್ಯಗಳ ಮಟ್ಟವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ನನ್ನ ಮಿತ್ರರು ಹೇಳಿದಹಾಗೆ ಪೌಲ್ಯಗಳ ಮಟ್ಟವನ್ನು ಕಾಯ್ದುಕೊಳ್ಳುವ ಒಂದು ವಿಧೇಯಕವನ್ನು ಮಾಡಬೇಕು. ಎಲ್ಲಾ ಪಕ್ಷಗಳು ಒಟ್ಟು ಗೂಡಿ ಒಂದು ನೀತಿಸಂಹಿತೆಯನ್ನು ಮಾಡಿದರೆ ಆನುಕೂಲವಾಗುತ್ತದೆ. ಯಾವುದೇ ವಿಷಯಗಳು ಬಂದರೂ ಅವನ್ನು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುವುದನ್ನು ಬಿಟ್ಟರೆ ಬೇರೇನೂ ಮಾಡದ ಹಾಗೆ ಒಂದು ನೀತಿಸಂಹಿತೆಯನ್ನು ರೂಪಿಸಿದರೆ ಇಂತಹ ಕೆಲಸಗಳು ಆಗುವುದಿಲ್ಲ. ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವವರು ಯಾವರೀತಿ ನಡೆದುಕೊಳ್ಳಬೇಕು. ಸರ್ಕಾರ ಮತ್ತು ದೇಶ ಯಾವರೀತಿ ನಡೆಯಬೇಕೆಂಬುದನ್ನು ತಿಳಿದುಕೊಂಡಿರಬೇಕು. ಯಾವುದಕ್ಕೂ ತಾಳ್ಮೆ ಸಹನೆ ಇರುವಂತಹ ಜನ ಇಂತಹ ಕೆಲಸವನ್ನು ಮಾಡುವುದಿಲ್ಲ ಅಂತಹ ಕೆಲಸವನ್ನು ಮಿತ್ರರಾದ ಪ್ರತಿಪಕ್ಷದವರು ಮಾಡಿದ್ದಾರೆ. ಅದರ ಬಗ್ಗೆ ನಾನು ಇನ್ನೊಂದು ವಿಚಾರ ಹೇಳಬೇಕಾಗಿದೆ. ನಿನ್ನೆ ಅಪ್ರೊಪ್ರಿಯೇಷನ್ ಬಿಲ್ ಬಂದಿತ್ತು, ಶ್ವೇತಪತ್ರ ಪ್ರಕಟ ಮಾಡಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡಲಿಕ್ಕೆ ಕಾಲಾವಕಾಶ

ಕೊಡುತ್ತಿದ್ದಾರೆ. ಶ್ವೇತಪತ್ರವನ್ನು ಪ್ರಕಟ ಮಾಡಿದ್ದು ಒಂದು ದೊಡ್ಡ ವಿಷಯವೆಂದು ತೆಗೆದು ಕೊಂಡು ಸಾಮಾನ್ಯ ಜನರ ತಲೆಯಲ್ಲಿ ಇದನ್ನೆಲ್ಲಾ ಹಾಕಿ ಇದು ಅಲ್ಪಸಂಖ್ಯಾತ ಸರ್ಕಾರವೆಂದು ಜನರ ಮನಸ್ಸಿನಲ್ಲಿ ತಂದು, ಸರ್ಕಾರಕ್ಕೆ ಬಿಕ್ಕಟ್ಟು ತಂದು ಸರ್ಕಾರವನ್ನು ಉರುಳಿಸುವ ಸಂಚು ಇದೆಯೆಂದು ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಇವತ್ತು ಇಲ್ಲಿ ನಡೆದಂತ ಘಟನೆ ಯಾರಿಗೂ ಸಂತೋಷ ವನ್ನುಂಟು ಮಾಡಿಲ್ಲ. ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟಿರತಕ್ಕವರಿಗೆ ಇದು ಸರಿಯಾದುದಲ್ಲ. ಇವತ್ತು ಇಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿಕೊಂಡು ಬರತಕ್ಕ ಕೆಲಸವನ್ನು ಪ್ರತಿಪಕ್ಷದ ಸದಸ್ಯರುಗಳು ಮಾಡಿಲ್ಲ. ರಾಜ್ಯದಲ್ಲಿ ಉನ್ನತಸ್ಥಾನವನ್ನು ಪಡೆದಿರತಕ್ಕ ಪವಿತ್ರವಾದ ವಿಧಾನಸಭೆ ಸರಿಯಾದ ರೀತಿಯಲ್ಲಿ ನಡೆದುಕೊಂಡಿಲ್ಲ. ಸಭಾಧ್ಯಕ್ಷರು ಪದೇ ಪದೇ ವಿನಂತಿ ಮಾಡಿಕೊಂಡರೂ ಅವರು ಕೇಳಲಿಲ್ಲ. ಅವರ ಒಂದು ವರ್ತನೆಯ ಬಗ್ಗೆ ನಮ್ಮ ಪಕ್ಷದ ಪರವಾಗಿ ನಾನು ಖಂಡಿಸಬೇಕಾಗಿದೆ. ಸರ್ಕಾರ ನಡೆಸುವಂತಹ ಆಡಳಿತ ಪಕ್ಷದ ಸದಸ್ಯರಲ್ಲಿ ನನ್ನ ಒಂದು ವಿನಂತಿ ಏನೆಂದರೆ ತಾವು ಈ ಸದನ ದಲ್ಲಿ ಕೊನೆಯಲ್ಲಿರುವ ಸದಸ್ಯರು ಹೇಳುವಂತಹ ವಿಷಯಗಳನ್ನು ಮನದಟ್ಟು ಮಾಡಿಕೊಂಡು ಪ್ರಜಾ ಪ್ರಭುತ್ವದ ಪದ್ಧತಿಯೊಳಗೆ ಕೆಲಸ ಮಾಡಬೇಕಾಗಿದೆ. ಉದ್ರೇಕಕ್ಕೆ ಯಾವುದೇ ರೀತಿಯಲ್ಲಿ ಕಾರಣವಾಗದ ರೀತಿಯಲ್ಲಿ ನಡೆದುಕೊಳ್ಳಬೇಕು. ನಾವೆಲ್ಲರೂ ಒಟ್ಟುಗೂಡಿ ಈ ಸದನದ ಕಾರ್ಯಕಲಾಪಗಳ ಗುಣಮಟ್ಟ ವನ್ನು ಹೆಚ್ಚಿಸೋಣವೆಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಸನ್ಮಾನ್ಯ ಅಧ್ಯಕ್ಷರೇ ನಾನು ಮೊಟ್ಟ ಮೊದಲನೆಯ ಬಾರಿಗೆ ಶಾಸಕನಾಗಿ ಈ ಸಭೆಗೆ ಬರುತ್ತಿದ್ದೇನೆ. ಆದರೆ ಪರಿಸ್ಥಿತಿ ಈ ರೀತಿ ಇರುತ್ತದೆಂದು ನಾನು ತಿಳಿದಿರಲಿಲ್ಲ. ಸುಮಾರು ೩೫ ವರ್ಷಗಳಿಂದ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು. ಆದರೆ ಇವತ್ತು ಆ ಒಂದು ಪಕ್ಷ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿದೆ. ನಮ್ಮಂತಹ ಹೊಸ ಶಾಸಕರಿಗೆ ಒಂದು ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕಿಕೊಡುತ್ತದೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಅಂಥ ಒಂದು ಒಳ್ಳೆಯ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಿಲ್ಲವೆಂದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಮತ್ತು ಒಳ್ಳೆಯ ರೀತಿಯಲ್ಲಿ ಸರ್ಕಾರಕ್ಕೆ ಸಲಹೆಗಳನ್ನು ಕೊಡುತ್ತಾರೆಂದು ಕೂಡ ನಾನು ತಿಳಿದುಕೊಂಡಿದ್ದೆ. ಆದರೆ ಈಗ ನೋಡಿದರೆ ಅದು ಬರೀ ಧೂಮಯೆಂದು ನಮಗೆ ಗೊತ್ತಾ ಯಿತು. ಇಲ್ಲಿ ನಾವು ಚರ್ಚೆ ಮಾಡುವಂಥ ವಿಷಯ ಒಳ್ಳೆಯ ರೀತಿಯಲ್ಲಿ ಜನರಿಗೆ ಮುಟ್ಟುವಂತಹ ರೀತಿಯಲ್ಲಿ ಇರಬೇಕು. ವಿಚಾರ ವಿನಿಮಯ ಮಾಡಬೇಕು. ವಿಚಾರ ಸಂಕೀರ್ಣವಾಗಬೇಕು. ಆದರೆ ಇವತ್ತು ಮಾನ್ಯ ವಿರೋಧಪಕ್ಷದ ಸದಸ್ಯರು ಅಂದರೆ ಕಾಂಗ್ರೆಸ್ ಮತ್ತು ಕ್ರಾಂತಿರಂಗದ ಸದಸ್ಯರು ವರ್ತಿ ಸಿದ ರೀತಿಯನ್ನು ನೋಡಿದರೆ ನನಗೆ ಬಹಳ ಬೇಜಾರಾಗಿದೆ ಅವರು ಆ ರೀತಿ ವರ್ತನೆ ಮಾಡಬಾರದಾಗಿ ತ್ತೆಂದು ನನ್ನ ಅಭಿಪ್ರಾಯ ಆದರೆ ಅವರು ಮಾಡಿದಂಥ ವರ್ತನೆಯಿಂದ ನವ ಗೆ ಏನು ಗೊತ್ತಾಗು ತ್ತದೆಂದರೆ ಇದರ ಹಿನ್ನೆಲೆಯಲ್ಲಿ ಜನತಾ ಸರ್ಕಾರವನ್ನು ಉರುಳಿಸುವ ತಂತ್ರವನ್ನು ಮಾಡುತ್ತಿದ್ದಾರೆಂದು ನನಗನ್ನಿಸುತ್ತದೆ. ಅವರು ನೆನ್ನೆಯಿಂದ ಮಾಡಿದಂತಹ ಪ್ರತಿಪಾದನೆಯನ್ನು ನೋಡಿದರೆ ಇದರ ಹಿನ್ನೆಲೆಯಲ್ಲಿ ಏನೋ ಸಂಚು ನಡೆಯುತ್ತಿದೆ ಎಂದು ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಬೇಕಾದರೆ ಆ ಬಗ್ಗೆ ಚರ್ಚೆ ಮಾಡಬಹುದಾಗಿತ್ತು. ಆದರೆ ಅವರು ಇಲ್ಲದ ಸಮಯವನ್ನು ನೋಡಿಕೊಂಡು ಇವರು ಈ ರೀತಿ ವರ್ತನೆ ಮಾಡುವುದು ಸರಿಯಲ್ಲ. ಮಾನ್ಯ ಅಧ್ಯಕ್ಷರ ಪೀಠಕ್ಕೆ ನುಗ್ಗಿ ಅಲ್ಲಿ ದಾಂದಲೆ ಮಾಡಿರುವುದು ಇದು ಕರ್ನಾಟಕದ ಇತಿಹಾಸದಲ್ಲಿಯೇ ಒಂದು ಮೈಲಿಗಲ್ಲಾಗಿದೆ. ಅಲ್ಲಿ ಇರುವಂಥ ಮೈಕ್ ಸಹ ಕಿತ್ತು ಹಾಕಿದ್ದಾರೆ ಇದು ಸರಿಯಾದ ಸತ್‌ಸಂಪ್ರದಾಯವಲ್ಲ. ಇಂಥ ಸಂಪ್ರ ದಾಯವನ್ನು ನಾವು ಬೆಳಸಿಕೊಂಡು ಹೋಗಬಾರದು. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಎತ್ತಿಕೊಂಡು ಹೋಗಿ ಹೊರಗಡೆ ಬಿಟ್ಟರು. ಅಂದರೆ ಮಾನ್ಯ ವೀರಪ್ಪಮೊಯ್ಲಿಯವರು ಆ ರೀತಿ ವರ್ತನೆ ಮಾಡುತ್ತಾರೆಂದು ನಾನು ತಿಳಿದುಕೊಂಡಿಲ್ಲ. ಮತ್ತೆ ಆಡಳಿತ ಪಕ್ಷಕ್ಕೂ ಕೂಡ ನಾನು ಒಂದು ಸಲಹೆಯನ್ನು ಕೊಡಬೇಕಾಗುತ್ತದೆ. ಆಡಳಿತ ಪಕ್ಷದವರು ಯಾವಾಗಲೂ ವಿರೋಧ ಪಕ್ಷದ ಟೀಕೆ ಮತ್ತು ಟಿಪ್ಪಣಿಗಳಿಗೆ ಸಂಯಮದಿಂದ ಇರಬೇಕಾಗುತ್ತದೆ. ವಿರೋಧ ಪಕ್ಷದವರು ಏನೇ ಟೀಕೆ ಮಾಡಿ ದರೂ ಕೂಡ ಅದು ಆಡಳಿತ ಪಕ್ಷಕ್ಕೆ ಮಾರ್ಗದರ್ಶನವಾಗುತ್ತದೆ ಆದ್ದರಿಂದ ಆಳುವ ಪಕ್ಷದವರು ಸಹ ಜವಾಬ್ದಾರಿಯಿಂದ ವರ್ತನೆ ಮಾಡಬೇಕಾಗುತ್ತದೆ. ಈ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಕ್ಕೆ ಬಿಡಬಾರದು. ೫ ವರ್ಷಗಳ ಕಾಲ ಜನತಾ ಪಕ್ಷ ಅಧಿಕಾರದಲ್ಲಿದ್ದು, ಚುನಾವಣೆಯ ಕಾಲ ದಲ್ಲಿ ಜನತೆಗೆ ಜನತಾ ಸರ್ಕಾರ ಕೊಟ್ಟಂತಹ ಆಶ್ವಾಸನೆಗಳನ್ನು ಪೂರ್ತಿಯಾಗಿ ಈಡೇರಿಸಿ ಮತ್ತೆ ಜನತಾ

ಪಕ್ಷ ಅಧಿಕಾರಕ್ಕೆ ಬರಲೆಂದು ಹಾರೈಸುತ್ತಾ ಇದುವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್. —ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಮ್ಮ ವಿರೋಧ ಪಕ್ಷದ ಸದಸ್ಯರು ವರ್ತಿಸಿದ ರೀತಿಯನ್ನು ನೋಡಿದರೆ ನಿಜವಾಗಿಯೂ ಕೂಡ ನನಗೆ ಬಹಳ ನೋವುಂಟಾಗಿದೆ. ಇವತ್ತಿನ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ವರ್ತಿಸಿದ ರೀತಿಯನ್ನು ನೋಡಿ ನನಗೆ ಮೈಯ್ಯಲ್ಲಿ ರಕ್ತ ಬಿಸಿಯಾಯಿತು. ಆದರೂ ಕೂಡ ನಮ್ಮ ಪಕ್ಷದ ಒಂದು ನೀತಿಗೆ ನಾವು ಕಟ್ಟುಬಿದ್ದು ಸುಮ್ಮನೆ ಕುಳಿತುಕೊಂಡಿದ್ದೇವು. ಆದರೂ ಕೂಡ ನಾನು ಒಟ್ಟಾರೆ ಹೇಳುವುದಾದರೆ ಅವರು ಮಾಡಿದಂತಹ ಕೆಲಸ ಯಾವ ಒಬ್ಬ ಶಾಸಕರಿಗೂ ಕೂಡ ಗೌರವ ತರತಕ್ಕಂಥ ವಿಷಯವಲ್ಲ. ಆದೂ ಅಧ್ಯಕ್ಷರ ಪೀಠಕ್ಕೆ ನುಗ್ಗಿ ದಾಂದಲೆಯನ್ನು ಮಾಡಿದ್ದಾರೆ. ಅವರು ಮಾಡಿದಂಥ ಉದ್ದೇಶ ಜನತಾ ಪಕ್ಷಕ್ಕೆ ಅಗೌರವವನ್ನುಂಟು ಮಾಡಬೇಕೆಂಬುದೇ ಆಗಿದೆ ಕಾಂಗ್ರೆಸ್ ಪಕ್ಷ ಸುಮಾರು ೩೫ ವರ್ಷಗಳಿಂದ ಅಧಿಕಾರದಲ್ಲಿದ್ದು ಇವತ್ತು ಅವರು ಅಧಿಕಾರವಿಲ್ಲದೆ ವಿಲಿವಿಲಿ ಒದ್ದಾಡುತ್ತಿದ್ದಾರೆ. ಅವರು ಅಧಿಕಾರವನ್ನು ಕಳೆದುಕೊಳ್ಳಬೇಕಾದರೆ ಅವರ ಒಂದು ವರ್ತನೆಯೇ ಕಾರಣವಾಯಿತು. ಈ ರಾಜ್ಯದಲ್ಲಿ ರೈತರ ಮೇಲೆ, ಕಾರ್ಮಿಕರ ಮೇಲೆ, ಗುಂಡು ಹಾಕಿ ಸೋವನ್ನುಂಟು ಮಾಡಿದ ಪ್ರತಿಫಲವಾಗಿ ಈ ದಿವಸ ಅವರು ಆ ರೀತಿಯ ಒಂದು ಅವಸ್ಥೆಯನ್ನು ಅನುಭವಿಸುತ್ತಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಜನತಾ ಪಕ್ಷ ಸಂಪೂರ್ಣವಾಗಿ ೫ ವರ್ಷಗಳ ಕಾಲ ರಾಜ್ಯವನ್ನು ನಡೆಸಿಕೊಂಡು ಹೋಗುತ್ತದೆ ಎನ್ನುವ ಭರವಸೆ ನನಗೆ ಇದೆ. ಆದರೆ ಕಾಂಗ್ರೆಸ್ ಪಕ್ಷದವರು ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಯಾವ ರೀತಿಯಲ್ಲಿ ವರ್ತನೆ ಮಾಡಬೇಕೆಂದು ಗೊತ್ತಿಲ್ಲದೆ ಅಜ್ಞಾನಿಗಳಾಗಿದ್ದಾರೆ. ಆದ್ದರಿಂದ ಅವರು ಅಜ್ಞಾನದ ಒಂದು ಪಾಪದ ಪಿಂಡದಲ್ಲಿ ತೇಲಾಡುತ್ತಿದ್ದಾರೆ. ಆದರಿಂದ ಅವರು ಪಾರಾಗಬೇಕಾದರೆ ಇನ್ನು ಸಾಕಷ್ಟು ಸಮಯ ಬೇಕಾಗುತ್ತದೆ. ಜನತಾ ಪಕ್ಷ ಅಧಿಕಾರವಿಲ್ಲದೆ ಇರುವಾಗ ಯಾವ ರೀತಿಯಾಗಿ ಕೆಲಸ ಮಾಡಿದ್ದಾರೆ ಎನ್ನುವುದನ್ನು ತಾವು ವರದಿ ನೋಡಿದರೆ ಗೊತ್ತಾಗುತ್ತದೆ. ಆದರೆ ಒಂದು ಮಾತನ್ನು ಮಾತ್ರ ಹೇಳಬೇಕಾಗುತ್ತದೆ. ಅದು ಏನೆಂದರೆ ಜನತೆಯ ವಿಶ್ವಾಸ ಎಲ್ಲಿಯವರೆಗೆ ಈ ಪಕ್ಷದ ಮೇಲೆ ಇರುತ್ತದೆಯೋ ಅಲ್ಲಿಯವರೆಗೆ ನಾವು ಅಧಿಕಾರದಲ್ಲಿರುತ್ತೇವೆ. ಆದರೆ ಯಾರು ಏನು ಮಾಡಿದರೂ ಅಧಿಕಾರದಿಂದ ಹೊರಗೆ ಇರುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. —ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಮಾತನಾಡುವಾಗ ವಿರೋಧ ಪಕ್ಷದವರು ಯಾವ ರೀತಿಯಲ್ಲಿ ವರ್ತಿಸಬೇಕು ಎಂಬುದು ಗೊತ್ತಿಲ್ಲದೆ ಅಜ್ಞಾನದಲ್ಲಿ ಮುಳುಗಿದ್ದಾರೆಂದು ಹೇಳಿದರು. ಆದರೆ ನಾವೂ ಕೂಡ ವಿರೋಧ ಪಕ್ಷದ ಸದಸ್ಯರು. ಆದ್ದರಿಂದ ಆ ಮಾತನ್ನು ಅವರು ಉಪಯೋಗ ಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. —ಮಾನ್ಯ ಸದಸ್ಯರು ಅಜ್ಞಾನಿಗಳೆಂದು ಹೇಳಿದ ಪದ ಸರಿಯಾದ ಪದವಲ್ಲ. ಅದನ್ನು ಇನ್ನು ಮುಂದೆ ಯಾರೂ ಉಪಯೋಗಿಸಬಾರದೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್. —ಮಾನ್ಯ ಅಧ್ಯಕ್ಷರೇ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರು ವರ್ತಿಸಿದ ರೀತಿಯನ್ನು ನೋಡಿ ನಾನು ಆ ರೀತಿ ಹೇಳಬೇಕಾಯಿತು. ಆದರೆ ಇವತ್ತು ಜನತೆಯಲ್ಲಿ ಜನತಾ ಪಕ್ಷದ ಮೇಲೆ ಸಂಪೂರ್ಣ ವಿಶ್ವಾಸ ಇದೆ. ಜನತಾ ಪಕ್ಷ ಸಂಪೂರ್ಣವಾಗಿ ೫ ವರ್ಷಗಳ ಕಾಲ ಇರುತ್ತದೆ. ಅದರಲ್ಲಿ ಯಾರಿಗೂ ಅನುಮಾನ ಬೇಡ. ಸುಮಾರು ೫೫ ವರ್ಷಗಳ ಕಾಲ ಅಧಿಕಾರದಲ್ಲಿದ್ದು ಈಗ ಅಧಿಕಾರ ಕಳೆದುಕೊಂಡಿರತಕ್ಕಂಥ ಪಕ್ಷ ಸುಮ್ಮನೆ ಕುಳಿತುಕೊಂಡಿರಲು ಆಗದೆ ಏನೇನು ಮಾಡುತ್ತಿದ್ದಾರೆ. ಅದು ಅವರ ಕೇವಲ ಭ್ರಮೆ ಮಾತ್ರ. ಜನತಾ ಪಕ್ಷ ೫ ವರ್ಷಗಳ ಕಾಲ ಅಧಿಕಾರದಲ್ಲಿ ಇರಬೇಕೆಂದು ಹಾರೈಸುತ್ತಾ ಇದುವರೆಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

೭ಪಿ.ಎಂ.

ಶ್ರೀ ಜೆ. ಹೆಚ್. ಪಟೇಲ್ (ಅಬ್ಕಾರಿ ಮತ್ತು ವಿದ್ಯುಚ್ಛಕ್ತಿ ಸಚಿವರು). —ಸನ್ಮಾನ್ಯ ಅಧ್ಯಕ್ಷರೇ, ಬೆಳಗಿನಿಂದ ಇಲ್ಲಿಯವರೆಗೆ ನಡೆದ ಘಟನೆಗಳನ್ನು ನೋಡಿದ್ದೇ ಆದರೆ ಕೊನೆಗೂ ಹೇಗೆ ಕೊನೆಗೊಳ್ಳಬೇಕಾಗಿತ್ತೋ ಹಾಗೆಯೇ ಕೊನೆಗೊಂಡಿದೆ. ವಿರೋಧವನ್ನು ಹೊಂದದೇ

ಇದ್ದರೆ ಅದು ಪ್ರಜಾತಂತ್ರವೇ ಅಲ್ಲ. ಈ ಕಾರಣಕ್ಕೋಸ್ಕರವಾಗಿ ನಮ್ಮ ವಿರೋಧಿಗಳು ಒಂದು ಮಣದಷ್ಟು ಸದ್ದು ಮಾಡಿದರೂ ಕೂಡ ನಾವು ಒಂದು ತೃಣದಷ್ಟೂ ಸದ್ದು ಮಾಡದೇ ಸಹಿಸಿಕೊಂಡು ಬಂದಿದ್ದೇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿರೋಧಪಕ್ಷದವರು ಧರಣಿ ಮಾಡುವುದು, ಹೊರಗೆ ಹೋಗುವುದು ಸಹಜವಾದದ್ದು. ಯಾರು ಧರಣಿ ಮಾಡದೇ ಹೋದರೆ ನಮಗಾದರೂ ಅನಿಸುತ್ತದೆ ಏಕೆ ಯಾರು ಧರಣಿ ಮಾಡುತ್ತಿಲ್ಲವೆಂದು. ಆದರೆ ಶ್ವೇತ ಪತ್ರವನ್ನು ಇಡದೇ ಇದ್ದಿದ್ದರೆ ಅವರು ಧರಣಿ ಮಾಡಬೇಕಾಗಿತ್ತು. ನ್ಯಾಯವಾಗಿ ಏನಾದರೂ ಕ್ರಾಸ್ ಆಫ್ ಆಕ್ಷನ್‌ನಿಂದ ಶ್ವೇತಪತ್ರವನ್ನು ಇಡದೇ ಇದ್ದಿದ್ದರೆ. ಅಥವಾ ಇಷ್ಟೆಲ್ಲಾ ಹೇಳಿ ಮುಖ್ಯಮಂತ್ರಿಗಳಂ ಏಕೆ ಶ್ವೇತ ಪತ್ರವನ್ನು ಇಟ್ಟಿಲ್ಲವೆಂದು ಅವರು ಧರಣಿ ಮಾಡಬಹುದಾಗಿತ್ತು. ಆದರೆ ನಾವು ಇವತ್ತು ಭಾರತದ ಮೂಲೆ ಮೂಲೆಗಳಲ್ಲಿ ಈ ವಿಕೇಂದ್ರೀಕರಣದ ಬಗ್ಗೆ ಕೇಂದ್ರ ಮತ್ತು ರಾಜ್ಯದ ಸಂಬಂಧದ ಬಗ್ಗೆ ಈಗಲಾದರೂ ವಾತಾವರಣ ತಿಳಿಯದೇ ಹೋದರೆ, ಪಂಜಾಬ್, ಅಸ್ಸಾಮ್‌ಗಳಲ್ಲಿ ಆಗಿದ್ದಂತೆ ದುರ್ಘಟನೆಗಳು ಇಲ್ಲಿ ಆಗಬಹುದು, ರಾಷ್ಟ್ರ ವಿಘಟನೆ ಆಗಬಹುದು, ಎಂದು ಆ ಕಾರಣಕ್ಕಾಗಿ ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಕೇಂದ್ರ ಮತ್ತು ರಾಜ್ಯದ ಸಂಬಂಧ ಹೇಗೆ ಇರಬೇಕು ಎಂದು ವಿಚಾರ ಮಾಡುವಾಗ ರಾಜ್ಯಪಾಲರ ಹುದ್ದೆಯನ್ನು ಹೇಗೆ ನಡೆದುಕೊಳ್ಳಬೇಕೆಂದು ಮಾತ್ರ ಹೇಳಿದ್ದೇವೆ. ಇದನ್ನು ಮುಖ್ಯಮಂತ್ರಿಗಳು ಹೊರಗೂ ಹೇಳಿದ್ದಾರೆ. ಮತ್ತು ಒಳಗೂ ಹೇಳಿದ್ದಾರೆ ಆದರೆ ವಿರೋಧ ಪಕ್ಷದ ನಾಯಕರು ಎಲ್ಲೂ ಇಲ್ಲದೇ ಇರತಕ್ಕಂಥ ಒಂದು ಅತ್ಯಂತ ವಿಧೇಯತೆಯನ್ನು ತೋರಿಸುವಂತಹ ಪ್ರಯತ್ನವನ್ನು ಇಲ್ಲಿ ಮಾಡಿರುವಂತೆ ಕಾಣುತ್ತದೆ. ನಾವು ಶ್ವೇತಪತ್ರದಲ್ಲಿ ಯಾವುದೇ ಒಬ್ಬ ಗವರ್ನರ್ ಬಗ್ಗೆ ಹೇಳಿಲ್ಲ. ಇದರಲ್ಲಿ ಕೇಂದ್ರಸರ್ಕಾರದೊಡನೆ ಹೋರಾಟ ಮಾಡುವ ಮಾತಿಲ್ಲ. ಅವರು ಸಹ ನಂಬಿದ್ದಾರೆ ಏನೆಂದರೆ ಇವತ್ತು ಅವರ ಪಾರ್ಟಿಯವರೇ ರಾಷ್ಟ್ರ ಸರ್ಕಾರವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ನಾವಾದರೋ ನಮ್ಮದು ರಾಷ್ಟ್ರೀಯ ಪಕ್ಷ ಆದರೂ ಕೂಡ ನಾವು ಈ ರಾಜ್ಯ ಸರ್ಕಾರವನ್ನು ನಮ್ಮ ಹಿಡಿತದಲ್ಲಿಟ್ಟುಕೊಂಡಿರುವವರು. ಆದ್ದರಿಂದ ಅವರು ಅತ್ಯಂತ ಸಂತೋಷದಿಂದ ಚರ್ಚೆ ಮಾಡಬಹುದಾಗಿತ್ತು. ನಾವು ಅನೇಕ ಸಾರಿ ಹೇಳಿದ್ದೀರಿ. ಚರ್ಚೆ ಮಾಡೋಣ, ಬೇರೆ ಯಾವುದಾದರೂ ರೀತಿಯಲ್ಲಿ ಇದಕ್ಕೆ ಅವಕಾಶ ಮಾಡಿಕೊಡಂತ್ತೇನೆ ಎಂದು ಹೇಳಿದರೂ ಕೂಡ. ಅವರು ಮೊದಲೇ ಒಂದು ತೀರ್ಮಾನ ತೆಗೆದುಕೊಂಡು ಇದನ್ನು ಹೇಗಾದರೂ ಮಾಡಿ ವಿರೋಧ ಮಾಡಬೇಕೆಂದು ತೀರ್ಮಾನ ಮಾಡಿಕೊಂಡು ಹೀಗೆ ವರ್ತನೆ ಮಾಡಿದರು ಇದು ಅವರಿಗೆ ಒಳ್ಳೆಯ ಹೆಸರು ತರತಕ್ಕಂಥದಲ್ಲ ಮೇಲಾಗಿ ಇಲ್ಲಿ ಸಭೆಯ ಕಾರ್ಯ ಕಲಾಪಗಳು ನಡೆಯುವಾಗ ಒಂದು ನಿಮಿಷಕ್ಕೆ ಎರಡೂವರೆ ಸಾವಿರ ರೂಪಾಯಿ ಖರ್ಚಾಗುತ್ತದೆ. ಹೀಗಿರುವಾಗ ಮಾನ್ಯ ವಿರೋಧ ಪಕ್ಷದ ಸದಸ್ಯರು ವಿನಾಕರಣ ಜನತೆಯ ಸಮಯಸ್ಕೆಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡದೆ ಜನತೆಗೆ ಬೇಕಾದಂಥ ಕಾನೂನು ಪಾಸ್ ಮಾಡದೆ ಎಷ್ಟೊಂದು ಸಮಯವನ್ನು ಹಾಳು ಮಾಡಿದ್ದಾರೆ ಎಂದರೆ ನಿಜವಾಗಿಯೂ ಕರ್ನಾಟಕದ ಜನತೆ ಅವರಿಗೆ ಶಿಕ್ಷೆ ಕೊಡಬೇಕು, ನಾವು ಕೊಡುವುದು ಅಲ್ಲ ಇಷ್ಟು ಹೇಳಿದ್ದೇನೆ. ಇದರ ಬಗ್ಗೆ ಹೆಚ್ಚಿಗೆ ವಿಶ್ಲೇಷಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಪ್ರತಿಭಟನೆ ಮಾಡುವುದಕ್ಕೂ ಒಂದು ಗಂಭೀರತೆ ಇರುತ್ತದೆ. ಎಲ್ಲಾ ಪ್ರಜಾತಂತ್ರ ರಾಷ್ಟ್ರಗಳಲ್ಲಿ ಪ್ರತಿಭಟನೆ ಮಾಡುವುದನ್ನು ನೋಡಿದ್ದೇವೆ. ನಾನು ಕೂಡ ಲೋಕಸಭೆಯಲ್ಲಿ ಪ್ರತಿಭಟನೆ ಮಾಡಿದ್ದೇನೆ ಮತ್ತು ಪ್ರತಿಭಟನೆ ಮಾಡುವುದನ್ನು ನೋಡಿದ್ದೇವೆ. ಇಲ್ಲೂ ಕೂಡ ನಾವು ಪ್ರತಿಭಟನೆಯನ್ನು ಹಿಂದೆ ಮಾಡಿದ್ದೇವೆ. ಆದರೆ ಹಿಂದೆಂದೂ ಸಭಾಧ್ಯಕ್ಷರ ಮೇಲೆ ಕೈಮಾಡುವುದಕ್ಕೆ ಹೋಗುವಷ್ಟು ಕೆಳಮಟ್ಟಕ್ಕೆ ಯಾರೂ ಹೋಗಿರಲಿಲ್ಲ. ನನಗನಿಸುತ್ತದೆ ಏನೆಂದರೆ ಅವರು ಏನೋ ಹತಾಶರಾಗಿದ್ದಾರೆ, ಏನೇನೋ ಪುಸಲಾಯಿಸಲು ಹಗಲೆಲ್ಲಾ ಮಾಡಿ ಬಾರದ್ದು ಮಾಡಿ ಕೊನೆಗೆ ಹತಾಶರಾಗಿ ಹೊರಗೆ ಹೋದರು. ಕರ್ನಾಟಕದ ಸಂಸದೀಯ ವ್ಯವಹಾರಗಳಲ್ಲಿ ಬಹುಶಃ ತಮಗೆ ನೆನಪಿರಬಹುದು ಗೋಪಾಲಗೌಡರು ಒಂದು ಸಾರಿ ರಾಜ್ಯಪಾಲರ ಭಾಷಣದ ಬಗ್ಗೆ, ತಮ್ಮ ಸಿಟ್ಟನ್ನು ವ್ಯಕ್ತಪಡಿಸುವಾಗ ಮೈಕನ್ನು ಕಿತ್ತು ಸಿಟ್ಟನ್ನು ವ್ಯಕ್ತಪಡಿಸಿದರು. ಆಗ ಅನೇಕ ಪತ್ರಿಕೆಗಳಲ್ಲಿ. ಗೌಡರು ಒಳ್ಳೆಯ ಸಂಸದೀಯಪಟ್ಟು. ಆದರೆ ಇಂದೇಕೋ ಅವರ ಬುದ್ಧಿ ತಲೆಯಿಂದ ಕಾಲಿಗೆ ಬಂತು. ಎಂದು ಬರೆದರು. ನಮ್ಮಲ್ಲಿ ಕರ್ನಾಟಕದ ಪತ್ರಿಕಾ ಸಂಪ್ರದಾಯ ಇದೆ, ಶಾಸಕಾಂಗ ಸಂಪ್ರದಾಯ ಇದೆ, ಆದರೆ ನಾವು ಹಿಂದೆಂದೂ ಪಂಜಾಬ್‌ನವರ ಹಾಗೆ ಮಾಡಿಲ್ಲ. ಆದರೆ ಇವತ್ತು ಬೇರೆ ರಾಜ್ಯಗಳಲ್ಲಿ ನಮ್ಮವರು ಹೀಗೆ ಮಾಡುತ್ತಾರೆ. ನಾವು ಏಕೆ ಮಾಡಬಾರದು

ಎಂದು ಇಲ್ಲಿ ಕೂಡ ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ನಾನು ವಿರೋಧ ಪಕ್ಷದ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ ಏನೆಂದರೆ ರಾಷ್ಟ್ರದ ಜನತೆಯ ಸಮಸ್ಯೆಯ ಬಗ್ಗೆ ಚರ್ಚೆ ಮಾಡುವುದು ಬಿಟ್ಟು ಶ್ವೇತಪತ್ರದ ಬಗ್ಗೆ ಅದರ ನೆಪವೊಡ್ಡಿ ಧರಣಿ ಮಾಡಿರುವುದು ಕರ್ನಾಟಕದ ಜನತೆಗೆ ಮಾಡಿದಂತಹ ಅಪಚಾರವಾಗಿದೆ. ನಾನು ಮತ್ತೆ ಈ ಮನೆಗೆ ಮನವಿಮಾಡಿಕೊಳ್ಳುವುದೇನೆಂದರೆ ಅವರು ಪಶ್ಚಾತಾಪ ವ್ಯಕ್ತಪಡಿಸಿದರೆ ಈ ಶಿಕ್ಷೆಯನ್ನು ಮುಂದುವರಿಸುವ ಅಗತ್ಯ ಇಲ್ಲವೆಂದು ಹೇಳಿ ಮುಖ್ಯಮಂತ್ರಿಗಳು ಇಟ್ಟಿರತಕ್ಕಂಥ ಶ್ವೇತಪತ್ರ ಮಂಡಿಸಿದ ಸಂದರ್ಭದಲ್ಲಿ ಹೇಳಿದ ಎಲ್ಲಾ ಮಾತುಗಳನ್ನು ಈ ಸದನ ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತದೆ ಮತ್ತು ಅದನ್ನು ಸಮರ್ಥಿಸಿಕೊಳ್ಳುತ್ತದೆ ಎಂದು ಇಷ್ಟು ಹೇಳಿ ನನ್ನ ಮಾತಂಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್ (ಹಣಕಾಸು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) **ಮಾನ್ಯ ಅಧ್ಯಕ್ಷರೇ,** ಇಷ್ಟೆಲ್ಲಾ ವಿವರಣಾತ್ಮಕವಾದ ವಿಚಾರಗಳನ್ನು ಮಾನ್ಯ ಸದಸ್ಯರು ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಅವರು ಧರಣಿ ಕುಳಿತುಕೊಂಡಿದ್ದಾಗಲೇ ಮಾನ್ಯ ಸದಸ್ಯರ ಹತ್ತಿರ ಹೋಗಿ ಮಾತನಾಡಿದ್ದೇನೆ. ಈ ಅಪ್ರೋಪ್ರಿಯೇಷನ್ ಬಿಲ್ ಏನಿದೆ, ಅದನ್ನು ಈ ಸಭೆ ಪಾಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂಕ್ಕ ಎಲ್ಲಾ ವಿಷಯಗಳ ಬಗ್ಗೆ ನಾವು ತೆರೆದ ಮನಸ್ಸು ಇಟ್ಟುಕೊಂಡಿದ್ದೇವೆ ಇವುಗಳ ಬಗ್ಗೆ ಬೇರೆ ಯಾವ ರೀತಿ ಯಲ್ಲಾದರೂ ಚರ್ಚೆ ಮಾಡುವುದಕ್ಕೆ ಈ ಮನೆಯಲ್ಲಿ ಅವಕಾಶ ಇದೆ ಈ ಅವಕಾಶವನ್ನು ಉಪಯೋಗಿಸಿಕೊಳ್ಳುವಂಥ ಶಕ್ತಿ ತಮಗೆ ಇದೆ, ದಯವಿಟ್ಟು ಈ ಅಪ್ರೊಪ್ರಿಯೇಷನ್ ಬಿಲ್ ಪಾಸ್ ಮಾಡುವುದಕ್ಕೆ ಸಹಾಯ ಮಾಡಿ ಎಂದು ನಾನು ಮನವಿ ಮಾಡಿದೆ. ಆಗ ಅವರು ಎರಡು ವಿಚಾರಗಳನ್ನು ನಮ್ಮ ಮುಂದೆ ಇಟ್ಟರು ಮೊದಲನೆಯದು ಈ ಶ್ವೇತಪತ್ರದ ಮೇಲೆ ನಾವು ದೀರ್ಘವಾಗಿ ಚರ್ಚೆಮಾಡುವುದಕ್ಕೆ ಸಿದ್ಧರಿಲ್ಲ ಎಂಡನೆಯದು ಮುಖ್ಯ ಮಂತ್ರಿಗಳು ಆವಾಚ್ಯ ಶಬ್ದಗಳನ್ನು ಬಳಸಿ ನಮಗೆ ನೋವನ್ನು ಉಂಟುಮಾಡಿದ್ದಾರೆ; ಆದ್ದರಿಂದ ನಾವು ಅಪ್ರೋಪ್ರಿಯೇಶನ್ ಬಿಲ್ ಪಾಸ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದರು ಆಗ ನಾನು ಹೇಳಿದೆ ಈ ಅಪ್ರೋಪ್ರಿಯೇಶನ್ ಬಿಲ್ಲಿಗೂ, ಮುಖ್ಯ ಮಂತ್ರಿಗಳು ಹೇಳಿದ ಮಾತಿಗೂ ಸಂಬಂಧ ಇಲ್ಲ. ಮುಖ್ಯ ಮಂತ್ರಿಗಳಾಡಿದ ಮಾತಿಗೆ ತಕ್ಕ ಜವಾಬು ಕೊಡತಕ್ಕಂಥಶಕ್ತಿ ಮತ್ತು ಅವಕಾಶ ನಿಮಗೆಇದೆ ಈ ಬಿಲ್‌ಗೆ ನೀವು ಅಡ್ಡಿ ಬರಬಾರದು ಎಂದುನಾನು ಪ್ರಾರ್ಥನೆ ಮಾಡಿಕೊಂಡೆ ಆದರೆ ಅದಕ್ಕೆ ಅವರು ಒಪ್ಪಿಕೊಳ್ಳಲಿಲ್ಲ ಇದೇಬೆ ರೆ ವಿಚಾರ ನೀವುಮುಖ್ಯ ಮಂತ್ರಿಗಳು ಹೇಳಿದಂಥ ಮಾತುಗಳಬಗ್ಗೆ ನಿಮ್ಮ ಕೋಪವನ್ನುವ್ಯಕ್ತಪಡಿಸಬೇಕಾದರೆ ಬೇರೆ ಎಷ್ಟೋ ರೀತಿಯಲ್ಲಿ ನಿಮ್ಮ ತರ್ಕ ಶಕ್ತಿಯನ್ನು ಉಪಯೋಗಿಸಿ ಹೇಳಿ ಇದರಿಂದ ಅವರ ಉದ್ದೇಶ ಏನು ಇತ್ತು ಏಂದರೆ ಕಾರಣ ಏನೇ ಇರಲಿ ಕಾಲು ಕೆರೆದುಕೊಂಡು ಇದನ್ನು ಅಡ್ಡಿಪಡಿಸಬೇಕೆಂಬ ಒಂದು ನಿರಾಶಾ ಮನೋಭಾವದ ಪ್ರಪೃತ್ತಿಯನ್ನು ಅವರ ಕಾರ್ಯಾಚರಣೆಯಲ್ಲಿ ಇತ್ತು ತೋರಿಸಿದ್ದಾರೆ. ಕರ್ನಾಟಕದ ಜನತೆ ಬುದ್ಧಿವಂತ ಜನತೆ ಅವರು ನಡೆದ ಘಟನೆಯ ಉದ್ದೇಶ ಮತ್ತು ಪರಿಣಾಮವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುತ್ತಾರೆಂಬ ಸಂಪೂರ್ಣ ಭರವಸೆ ನನಗಿದೆ. ಶ್ವೇತ್ರ ಪತ್ರದ ಮೇಲೆ ಚರ್ಚೆ ಬೇಡವೆಂದಮೇಲೆ ಇನ್ನೇನು ಬೇಕು ನಿಮಗೆ ? ಅದಕ್ಕೂ ಉತ್ತರ ಇಲ್ಲ ಏನೋ ಒಂದು ಹೇಳಿ ಗುಲ್ಲನ್ನು ಎಬ್ಬಿಸಬೇಕು ಎಂದುಕೊಳ್ಳುವುದಾದರೆ ಜನತೆ ಅಷ್ಟು ಸುಲಭವಾಗಿ ತಪ್ಪು ಅಭಿಪ್ರಾಯ ಬದಲಾವಣೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇಲ್ಲವೆಂದು ತಿಳಿದುಕೊಂಡರೆ ಅವರು ಜಾಣರು ಇಲ್ಲದಿದ್ದರೆ ಅವರ ಮನಸ್ಸಿನ ತಿಳುವಳಿಕೆ ಎಷ್ಟು ಇದೆಯೆಂದು ಈಗಾಗಲೇ ಅಳತೆಮಾಡಿ ತೋರಿಸಿಕೊಟ್ಟಿದ್ದಾರೆ. ತಮ್ಮ ವಿಚಾರದಲ್ಲಿ ನಡೆದುಕೊಂಡತಹ ಅವರ ನಡುವಳಿಕೆ ಖಂಡನೀಯವಾದುದು. ತಮ್ಮ ರೂಲಿಂಗ್ ಅವರಿಗೆ ಹಿಡಿಸದೇ ಇರಬಹುದು ನಾನೂ ಅತ್ತ ಕಡೆ ಇದ್ದಾಗ ಅನೇಕ ಸಮಯದಲ್ಲಿ ಅಧ್ಯಕ್ಷರು ಕೊಟ್ಟಂತಹ ರೂಲಿಂಗ್ ಗಳನ್ನು ಪ್ರಶ್ನೆ ಮಾಡಿ ಕೇಳಿದ್ದು ಉಂಟು ಆದರೂ ರೂಲಿಂಗ್ ಆಯಿತು ಎಂದು ಸುಮ್ಮನೆ ಕುಳಿತುಕೊಂಡಿದ್ದೂ ಉಂಟು ನನಗೆ ಇಷ್ಟ ಇ ಲ್ಲ ದಿ ದ್ದಾ ಗ ಹೊರಗಡೆ ಹೋದಂತಹ ಸಮಯವೂ ಉಂಟು ಎಲ್ಲರೂ ಮೊದಲೇಕಾಲು ಕೆರೆದುಕೊಂಡು ಈ ರೀತಿಯಾಗಿ ದುರುದ್ದೇಶದಿ ವರ್ತಿಸಬಾರದಿತ್ತು ಅಂತೂ ಇಲ್ಲಿ ಆ ರೀತಿ ಮಾಡಿ ತೋರಿಸಿ ಇಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಜನರಿಗೆ ತಿಳುವಳಿಕೆಮಾಡಿ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದು ಸಾಧ್ಯವಾಗಲಿಲ್ಲ. ತಮ್ಮ ವಿಚಾರದಲ್ಲಿ ಅವರು ನಡೆದುಕೊಂಡಂತಾದ್ದು ಅತ್ಯಂತ ಖಂಡನೀಯವಾದುದು. ಅವರು ಅತ್ಯಂತ ಖಂಡನೀಯವಾಗಿ ನಡೆದು ಕೊಂಡಿದ್ದಾರೆ ಎನ್ನುವ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈ ದಿನ ಸಭೆಯಲ್ಲಿ ನಡೆದಂತಹ ಘಟನೆ ನನಗೆ ಸಂತೋಷವಾಗಿದೆ ಎಂದು ನಾನು ಭಾವನೆ ಮಾಡಿಕೊಂಡಿಲ್ಲ ವಿಚಾರ ಪ್ರಸ್ತಾಪವಾದುದು ತಮಗೆ ಗೊತ್ತಿದೆ ನಿಲುವಳಿ ಸೂಚನೆಯ ಆಧಾರದ ಮೇಲೆ ವಷಯದ ಗಂಭೀರತೆಯನ್ನು ಗೌಣಗೊಳಿಸಬೇಕೆಂದುದು ನನ್ನ ಚಿಂತೆಯಾಗಿರಲಿಲ್ಲ. ಆದರೆ ನಾವು ಕೆಲಸಮಾಡುವಾಗ ನಿಯಮದ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕಾಗಿದೆ. ಆ ನಿಯಮದ ಪ್ರಕಾರ ಈ ದಿವಸ ಪ್ರಸ್ತಾಪವಾದುದು ಆ ನಿಲುವಳಿ ಸೂಚನೆಯ ಒಂದು ವ್ಯಾಪ್ತಿಯೊಳಗೆ ಬರೇವುದಿಲ್ಲ ಎನ್ನುವಂತಹದ್ದು ನನ್ನ ಒಂದು ಅಭಿಪ್ರಾಯ ಅದನ್ನು ಹೇಳಿದ್ದೇನೆ. ನಾನು ಕನ್ನಡ ನಾಡಿನ ಜನರ ಆಶೀರ್ವಾದದಿಂದ ಸಂಸತ್ತಿನಲ್ಲಿ ಕೆಲಸ ಮಾಡಿದ್ದೇನೆ ಪ್ರತಿ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಮತ್ತು ಸದಸ್ಯನಾಗಿ ಕೆಲಸ ಮಾಡಿದ್ದೇನೆ. ನನ್ನ ಅನುಭವದ ಆಧಾರದ ಮೇಲೆ ಒಂದು ಮಾತು ಸದಾ ನೆನಪಿಗೆ ಬರುತ್ತದೆ. ಇಲ್ಲಿ ಈ ಜಾಗದಲ್ಲಿ ಕೂಡ ಕೆಲಸ ಮಾಡುವಂತಹ ಅನುಭವದಿಂದ ಹೇಳುವುದಾದರೆ ಒಮ್ಮೊಮ್ಮೆ ಪ್ರತಿ ಪಕ್ಷದ ವಾದಕ್ಕೆ ಒಪ್ಪುವುದೇಕು ಎಂಬ ಮನಸ್ಸಿನ ನೆಲೆತ ಎಲೆದರೂ ಕೂಡ ನಿಯಮದ ವ್ಯಾಪ್ತಿಯೊಳಗೆ ಬರುವುದಿಲ್ಲ ಎನ್ನುವಂತಹದ್ದು ಅವರಿಗೆ ಮೆಚ್ಚುಗೆಯಾಗದಿದ್ದರೂ ನ್ಯಾಯವಾದ. ಯೋಗ್ಯವಾದ ನಿರ್ಣಯವನ್ನು ಕೊಡಬೇಕೆಂಬ ದೃಷ್ಟಿಯಿಂದ ಈ ಪೀಠದ ಗೌರವವನ್ನು ಕಾಪಾಡುವುದಕ್ಕೋಸ್ಕರ ನನ್ನ ಶಕ್ತಿ ಮೀರಿ ಪ್ರಯತ್ನ ಮಾಡಿದ್ದೇನೆ. ಅಂತಹ ಒಂದು ಪ್ರಯತ್ನದ ಫಲದಿಂದಲೇ ಇವತ್ತು ಕೊಟ್ಟಂತಹ ಒಂದು ನಿರ್ಣಯ ಕೂಡ. ಜೊತೆಗೆ ಶಾಸಕಾಂಗ ಅತ್ಯಂತ ಮುಖ್ಯವಾದುದು ಈ ರಾಜ್ಯದಲ್ಲಿರುವ ಜನರ ಹಿತವನ್ನು ಕಾಪಾಡ ತಕ್ಕಂತಹ ದೃಷ್ಟಿಯಿಂದ ಎಲ್ಲಾ ಬೇಡಿಕೆಗಳ ಚರ್ಚೆ ಮುಗಿದು ಮುಂದಿನ ಕೆಲಸಕಾರ್ಯಗಳಿಗಾಗಿ ಅಪ್ರೋಪ್ರಿಯೇಷನ್ ಬಿಲ್ಲನ್ನು ಪಾಸ್ ಮಾಡಬೇಕಾಗಿದ್ದು ಆ ಒಂದು ಕರ್ತವ್ಯವನ್ನು ಮಾಡದೇ ಹೋದರೆ ಜನರ ಕಲ್ಯಾಣ ಕಾರ್ಯವನ್ನು ಮಾಡುವುದಕ್ಕಾಗುವುದಿಲ್ಲ ಮತ್ತು ಒಂದು ರೂಪಾಯಿಯನ್ನೂ ಕೂಡ ಅಡ್ಜಿನಿಸ್ಟ್ರೇಟಿವ್ ವಿಂಗ್‌ನಿಂದ ತೆಗೆಯುವುದಕ್ಕಾಗುವುದಿಲ್ಲ. ಅದು ಈ ತಿಂಗಳ ೩೦ನೇ ತಾರೀಖಿಗೆ ಕೊನೆಗೊಳ್ಳುತ್ತಿತ್ತು. ಆ ನೃಷ್ಟಿಯಿಂದ ಈ ಶಾಸನ ಸಭೆಗೆ ಅತ್ಯಂತ ದೊಡ್ಡ ಜವಾಬ್ದಾರಿ ಇದೆ ಈ ಕೆಲಸವನ್ನು ಮಾಡಬೇಕಾದ ಈ ನಿರ್ದಿಷ್ಟ ವ್ಯವಸ್ಥೆಯಲ್ಲಿ ನನ್ನ ಎಲ್ಲ ಪ್ರಯತ್ನಗಳೂ ಮುಗಿದು ಅಂತಿಮವಾಗಿ ಅತ್ಯಂತ ಭಾರವಾದ ಮನಸ್ಸಿನಿಂದ ನೋವಿನಿಂದ ಈ ತೀರ್ಮಾನವನ್ನು ತೆಗೆದುಕೊಳ್ಳಬೇಕಾಯಿತು. ಆದಕ್ಕಾಗಿ ನನಗೆ ವಿಷಾದವಾಗಿದೆ. ಆದರೂ ನನ್ನ ಕಾರ್ಯವನ್ನು ನಾನು ಮಾಡಿದ್ದೇನೆ ಎನ್ನುವಂತಹ ಸಂತೋಷವೂ ನನಗೆ ಆಗಿದೆ. ನಾನು ಪುನಃ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ವೇತ ಪತ್ರದ ಬಗ್ಗೆ ಚರ್ಚೆ ಮಾಡುವುದು ಸರಿಯೋ ಅಥವಾ ತಪ್ಪೋ ಎನ್ನುವುದು ಅದು ಈ ಸದನಕ್ಕೆ ಬಿಟ್ಟಂತಹ ನಿರ್ಣಯಂ ತಾವು ಮಾಡಬೇಕು ಅಂದರೆ ಮಾಡಬಹುದ ಬೇಡ ಅಂದರೆ ಬಿಡಬಹುದು ಆದರೆ ನನ್ನ ಇವತ್ತಿನ ಅನುಭವದಲ್ಲಿ ತಾವೆಲ್ಲರೂ ಹೇಳಿದ ಹಾಗೆ ಶಾಸನಸಭೆಯ ಗೌರವವನ್ನು ಕಾಪಾಡತಕ್ಕಂತಹದ್ದು ನನ್ನ ಅತ್ಯಂತ ದೊಡ್ಡ ಜವಾಬ್ದಾರಿಯ ಕೆಲಸ. ಅದೇ ರೀತಿ ಅಧ್ಯಕ್ಷ ಸ್ಥಾನದ ಗೌರವವನ್ನೂ ಕಾಪಾಡ ತಕ್ಕಂತಹದ್ದು ನನ್ನ ಕರ್ತವ್ಯವೆಂದು ನಾನೆ ಮಾಡುತ್ತೇನೆ ನನ್ನ ಒಂದು ಸಂಸದೀಯ ಜೀವನದಲ್ಲಿ ಎಂದೆಂದೂ ಕೂಡ ಯಾರೂ ಅಧ್ಯಕ್ಷರ ತೀರ್ಪನ್ನು ಪ್ರಶ್ನೆ ಮಾಡಿದ್ದು ನನ್ನ ನೆನಪಿನಲ್ಲಿಲ್ಲ. ಅಂತಹ ಸಂದರ್ಭಗಳಿಗೆ ನಾನು ಅವಕಾಶ ಕೊಡುವುದಿಲ್ಲ. ಎಲ್ಲಿಯವರೆಗೆ ಸಭಾ ಅಧ್ಯಕ್ಷನಾಗಿರುತ್ತೇನೆಯೋ, ಅಲ್ಲಿಯವರೆಗೂ ಅಧ್ಯಕ್ಷ ಪೀಠಕ್ಕೆ ಹಾಗೂ ಅವರ ಗೌರವಕ್ಕೆ ಧಕ್ಕೆ ಬಾರದ ಹಾಗೆ ರಕ್ಷಣೆ ಮಾಡತಕ್ಕಂತಹ ಅತ್ಯಂತ ದೊಡ್ಡ ಜವಾಬ್ದಾರಿಯನ್ನು ನಿಭರಹಿಸುತ್ತೇನೆಂಬ ಆಶ್ವಾಸನೆಯನ್ನು ಮತ್ತೊಮ್ಮೆ ಕೊಟ್ಟು, ರಾಜ್ಯದ ಅತ್ಯಂತ ಜವಾಬ್ದಾರಿ ಲಸವಾದ ಅಪ್ರೋಪ್ರಿಯೇಷನ್ ಬಿಲನ್ನು ಪಾಸ್ ಮಾಡತಕ್ಕಂತಹ ಕೆಲಸಕ್ಕೆ ತಮ್ಮನ್ನು ಕರೆಯುತ್ತಿದ್ದೇನೆ.

THE KARNATAKA APPROPRIAITON (No. 2) BILL 1983

Bills for Consideration and Passing

MR. SPEAKER.—Sri Lakshmisagar, Hon'ble Minister for Law and Parliamentary Affairs to move on behalf of the Hon'ble Chief Minister.